**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ.**

**ಕ್ರಿ.ಮೊ. ಸಂಖ್ಯೆ 439/2025**

ಪಿರ್ಯಾದಿ ಃ ರಾಜ್ಯದ ಪರವಾಗಿ ಲಿಂಗದಹಳ್ಳಿ ಪೋಲೀಸರು

-ವಿರುದ್ಧ-

ಆರೋಪಿ/ತರುಃ ರಾಕೇಶ್ ಬಿನ್ ಸತ್ಯನಾರಾಯಣ

****

ಆ ರೋ ಪ ಣೆ

ದಿನಾಂಕ 05.01.2025 ರಂದು ಮಧ್ಯಾಹ್ನ 03.30 ಗಂಟೆ ಸಮಯದಲ್ಲಿ ಲಿಂಗದಹಳ್ಳಿ ಪೋಲೀಸ್ ಠಾಣಾ ಸರಹದ್ದಿನಲ್ಲಿ, ಆರೋಪಿಯಾದ ನೀವು ನಿಮ್ಮ ಹೆಂಡತಿ ಚಾಸಾ-1 ಶ್ರೀಮತಿ ಪ್ರೀತಿ ಮತ್ತು ಮಗಳು ತೇಜಶ್ರೀಯೊಂದಿಗೆ ನಿಮ್ಮ ಬಾಬ್ತು ಕೆಎಃ14/ಇಎಫ್-0724 ನೊಂದಣಿಯ ಹೀರೋ ಸ್ಪ್ಲೆಂಡರ್ ಪ್ಲಸ್ ಬೈಕಿನಲ್ಲಿ ಕಲ್ಲತ್ತಿಗಿರಿಗೆ ಹೋಗಿ ದೇವರ ದರ್ಶನ ಮಾಡಿಕೊಂಡು ವಾಪಸ್ಸು ನಿಮ್ಮ ಊರಾದ ಭದ್ರಾವತಿ ತಾಲ್ಲೂಕು ಸುಣ್ಣದಹಳ್ಳಿ ಗ್ರಾಮಕ್ಕೆ ಹೋಗುವ ಸಲುವಾಗಿ ನಂದಿ ಗೇಟ್ ಮತ್ತು ಬೈರಾಪುರ ಗೇಟ್ ಮಧ್ಯದಲ್ಲಿ, ಡಿ.ಎಸ್.ಸುರೇಶ್ ಮತ್ತು ಹರಿಯಪ್ಪರವರ ಅಡಿಕೆ ತೋಟಗಳ ಮಧ್ಯೆ ಹಾದು ಹೋಗಿರುವ ಎಸ್.ಹೆಚ್-57 ಚಿಕ್ಕಮಗಳೂರು-ತರೀಕೆರೆ ಟಾರು ರಸ್ತೆಯಲ್ಲಿ ಆರೋಪಿಯಾದ ನೀವು ಮೇಲ್ಕಂಡ ಬೈಕನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಮಾನವ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬರುತ್ತಿರುವಾಗ, ಬೈಕಿಗೆ ನಾಯಿ ಅಡ್ಡ ಬಂದಿದ್ದು ನಾಯಿಗೆ ಗುದ್ದುವುದನ್ನು ತಪ್ಪಿಸಲು ಹೋಗಿ ಬೈಕ್ ನಿಯಂತ್ರಣ ತಪ್ಪಿ ರಸ್ತೆಯ ಪಕ್ಕದ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದು ಅಪಘಾತ ಪಡಿಸಿದ್ದು, ಆದ್ದರಿಂದ ಆರೋಪಿಯಾದ ನೀವು ಬಿ.ಎನ್.ಎಸ್. ಕಲಂ 281 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದೀರಿ ಎಂದು ನಿಮ್ಮ ಮೇಲೆ ಆಪಾದನೆ ಇದೆ.

ಅದೇ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ನಿಮ್ಮ ಬಾಬ್ತು ಕೆಎಃ14/ಇಎಫ್-0724 ನೊಂದಣಿಯ ಹೀರೋ ಸ್ಪ್ಲೆಂಡರ್ ಪ್ಲಸ್ ಬೈಕ್ ನ್ನು ಅತಿವೇಗ ಹಾಗೂ ಅಜಾಗರೂಕತೆಯಿಂದ ಮಾನವ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಹೋಗಿ ಮೇಲ್ಕಂಡಂತೆ ಅಪಘಾತ ಪಡಿಸಿದ ಪರಿಣಾಮ ಬೈಕಿನ ಮುಂಭಾಗದಲ್ಲಿ ಕುಳಿತಿದ್ದ ಕುಃ ತೇಜಶ್ರೀಗೆ ತಲೆಗೆ ತೀವ್ರ ತರವಾದ ಪೆಟ್ಟಾಗಿ, ಚಿಕಿತ್ಸೆ ಫಲಕಾರಿಯಾಗದೇ ದಿನಾಂಕ 05.01.2025 ರಂದು ಸಂಜೆ 05.24 ಗಂಟೆಗೆ ಶಿವಮೊಗ್ಗದ ಮ್ಯಾಕ್ಸ್ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದು, ಆದ್ದರಿಂದ ಆರೋಪಿಯಾದ ನೀವು ಬಿ.ಎನ್.ಎಸ್. ಕಲಂ 106(1) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದೀರಿ ಎಂದು ನಿಮ್ಮ ಮೇಲೆ ಆಪಾದನೆ ಇದೆ.

ಅದೇ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ನಿಮ್ಮ ಬಾಬ್ತು ಕೆಎ:14/ಇಎಫ್-0724 ನೊಂದಣಿಯ ಹೀರೋ ಸ್ಪ್ಲೆಂಡರ್ ಪ್ಲಸ್ ಬೈಕ್ ನ್ನು ಅತಿವೇಗ ಹಾಗೂ ಅಜಾಗರೂಕತೆಯಿಂದ ಮಾನವ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಹೋಗಿ ಮೇಲ್ಕಂಡಂತೆ ಅಪಘಾತ ಪಡಿಸಿದ ಪರಿಣಾಮ ಬೈಕಿನ ಹಿಂಬದಿ ಸೀಟಿನಲ್ಲಿ ಕುಳಿತಿದ್ದ ಚಾಸಾ-1 ರವರಿಗೆ ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದು, ಆದ್ದರಿಂದ ಆರೋಪಿಯಾದ ನೀವು ಬಿ.ಎನ್.ಎಸ್. ಕಲಂ 125(ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದೀರಿ ಎಂದು ನಿಮ್ಮ ಮೇಲೆ ಆಪಾದನೆ ಇದೆ.

ಅದೇ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ನಿಮ್ಮ ಬಾಬ್ತು ಕೆಎ:14/ಇಎಫ್-0724 ನೊಂದಣಿಯ ಹೀರೋ ಸ್ಪ್ಲೆಂಡರ್ ಪ್ಲಸ್ ಬೈಕ್ ನ್ನು ವಿಮೆ ಮಾಡಿಸದೆ ಚಾಲನೆ ಮಾಡಿದ್ದು, ಆದ್ದರಿಂದ ಆರೋಪಿಯಾದ ನೀವು ಮೋಟಾರು ವಾಹನ ಕಾಯ್ದೆ ಕಲಂ 196 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದೀರಿ ಎಂದು ನಿಮ್ಮ ಮೇಲೆ ಆಪಾದನೆ ಇದೆ.

ಪ್ರಶ್ನೆ 1) ಈಗ ಓದಿ ಹೇಳಲಾದ ಆರೋಪಣೆಯನ್ನು ಕೇಳಿ ತಿಳಿದುಕೊಂಡಿರಾ?
ಉತ್ತರ:- ಹೌದು

ಪ್ರಶ್ನೆ 2) ನೀವು ಆರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆ?
ಉತ್ತರ:- ವಿಚಾರಣೆಯಾಗಬೇಕು

(ಮೇಲ್ಕಂಡ ಆಪಾದನೆಯನ್ನು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ, ಕೇಳಿದ ನಂತರ ಆರೋಪಿ ಕೊಟ್ಟ ಉತ್ತರವನ್ನು ನಾನೇ ಯಥಾವತ್ತಾಗಿ ಬರೆದುಕೊಂಡಿರುವುದು ನಿಜ ಮತ್ತು ಸತ್ಯವಾಗಿದೆಯೆಂದು ದೃಢೀಕರಿಸುತ್ತೇನೆ.)

ದಿನಾಂಕ: 09.06.2025

ಸಹಿ
**(ಊರ್ಮಿಳ.ವಿ.)**
**1** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ.